ತೊಗೊಳ್ಳಿ. ಆಮೇಲೆ ಹೇಳಿ ಅಂತ ನಮ್ಗೂ ತುಂಬಾ ಗೌರವ ಕೊಟ್ಟಳು. ಇದನ್ನೆಲ್ಲಾ ನೋಡಿ ನಾವು ಅವಳ ಆಯ್ಕೆಯನ್ನೇ ಒಪ್ಪಿದ್ವಿ. ಏ ಕಳ್ಳೀ ಯಾಕೇ ಇಷ್ಟೆಲ್ಲಾ ಕೇಳ್ತಾ ಇದ್ಯಾ... ನೀನೂ ಯಾರನ್ನಾದ್ರೂ...'

'ಏನಿಲ್ಲ ಅತ್ತೆ ಸುಮ್ಮನೆ ಕೇಳ್ದೆ... ಇಂಡಿಯಾದಲ್ಲಿ ಅರೇಂಜ್ಡ್ ಮ್ಯಾರೇಜ್ ಸಾಮಾನ್ಯ ಅಲ್ವಾ... ಅದಕ್ಕೆ.'

'ಹೌದು, ಆದ್ರೆ ಈಗ ಬದಲಾಗಿದೆ... ತಂದೆ ತಾಯಂದಿರು ಮಕ್ಕಳ ದಾರಿಗೆ ಅಡ್ಡಿ ಬರೋದಿಲ್ಲ... ಮಕ್ಕಳೂ ಕೂಡ ತಂದೆ ತಾಯಿಗೆ ಬೆಲೆ ಕೊಟ್ಟು ಅವರನ್ನು ಒಪ್ಪಿಸಿ ಮದುವೆಯಾಗ್ತಾರೆ.' ಅತ್ತೆ ಇನ್ನು ಏನೇನೋ ಹೇಳುತ್ತಲೇ ಇದ್ದರು. ನಾನು ಮಾತ್ರ ನನ್ನ ಆಲೋಚನೆಗಳಲ್ಲೇ ತಲ್ಲೀನಳಾಗಿಬಿಟ್ಟೆ. ಶರ್ಮಿಳಾ ಅವರ ಅಪ್ಪ, ಅಮ್ಮನ ಒಪ್ಪಿಗೆಗೆ ಎಷ್ಟು ಮಾನ್ಯತೆ ನೀಡಿದ್ದಾಳೆ ಎನ್ನುವ ವಿಚಾರ ನನ್ನ ಮನಸ್ಸನ್ನು ಕೊರೆಯಹತ್ತಿತ್ತು. ನಾನು ಅಮೆರಿಕದಲ್ಲಿ ಬೆಳೆದು ಆ individualistic society ಯಲ್ಲಿ ನಮ್ಮನ್ನು ಬೆಳೆಸಿದ ತಂದೆ ತಾಯಂದಿರಿಗೆ ಮಾನ್ಯತೆ ಕೊಡಬೇಕೆಂಬುದನ್ನೇ ಕಲಿಯಲಿಲ್ಲ... ಬಹುಶಃ ಶರ್ಮಿಳಾ ಅತ್ತೆ ಮಾವರನ್ನು ಕೇಳಿದ್ದಕ್ಕೆ ಅವರು ಸಂತೋಷದಿಂದ ಒಪ್ಪಿದರೇನೋ? ಏನೇ ಇರಲಿ ಇಲ್ಲಿಗೆ ಬಂದು ನನಗೆ ಕುಟುಂಬ ಎಂದರೇನು, ಅದರಲ್ಲಿ ಒಬ್ಬರಿಗೊಬ್ಬರು ಹೇಗೆ ತ್ಯಾಗ ಮಾಡುತ್ತಾ ಸಂತೋಷಪಡುತ್ತಾರೆ ಎನ್ನುವ ಸತ್ಯದ ಅರಿವಾಗಿತ್ತು. ನನ್ನ ರೋಜರ್ ಜೀವನ ಹೀಗಿರಬೇಕು... ಆದರೆ ಅದಕ್ಕೂ ಮೊದಲು ಅಮ್ಮನನ್ನು ರೋಜರ್ ಬಗ್ಗೆ ಮತ್ತೊಮ್ಮೆ ಕೇಳಬೇಕು. ಇವೆಲ್ಲಾ ಯೋಚಿಸುತ್ತಿರವಾಗಲೇ ಅಮ್ಮ ರೂಮಿನೊಳಗೆ ಬಂದರು. ಏಕೋ ಅವರನ್ನು ನೋಡಿದಾಗ ಅವರ ಮುಖದಲ್ಲಿ ಭಾರತಕ್ಕೆ ಬಂದಾಗ ಇದ್ದಂತಹ ಸಂತೋಷ ಉತ್ಸಾಹ ಕಾಣಿಸಲಿಲ್ಲ... 'ಸಂಯುಕ್ತಾ, ಇನ್ನೂ ಮಲಗಲಿಲ್ಲವಾ... ಬೇಜಾರು ಮಾಡಿಕೋಬೇಡ. ಮದುವೆ ಮುಗಿದ ಕೂಡಲೇ ಹೊರಟುಬಿಡೋಣ. ಹಾಂ, ಇನ್ನೊಂದು ವಿಷಯ, ಮದುವೆ ಮನೆಯಲ್ಲಿ ಮತ್ತೆ ತುಂಬಾ ನೆಂಟರೆಲ್ಲ ಬರಬಹುದು. ನಿನಗೆ ಮುಜುಗರ ಆಗಬಹುದು. ಆದರೆ... ಇದನ್ನೆಲ್ಲ ಸ್ವಲ್ಪ ದಿನ ಸಹಿಸಿಕೋ. ಆಮೇಲೆ ಹೊರಟುಬಿಡೋಣ.'

'ಮಮ್ಮಿ, I am quite alright. ನನಗೇನೂ ಡಿಸ್‌ಕಂಫರ್ಟ್ ಇಲ್ಲ. In fact, I am trying to understand everybody and their way of life. So ನೀನು ನನ್ನ ಬಗ್ಗೆ ಚಿಂತೆ ಮಾಡಬೇಡ. ನೀನು ಎಂಜಾಯ್ ಮಾಡು'

* * *

ಸಂಯುಕ್ತಾ ಕೊಟ್ಟ ಉತ್ತರ ಕೇಳಿ ನನಗೆ ಒಂದು ಕ್ಷಣ ಆಶ್ಚರ್ಯವಾಯಿತು. ಪರವಾಗಿಲ್ಲ, ಇವಳು ಇಲ್ಲಿ ಸರಿಯಾಗೇ ಇದ್ದಾಳಲ್ಲಾ... ನಾನೇ ಡಿಸ್ಟರ್ಬ್ ಆಗಿದ್ದೇನೆ. 'ಎಂಜಾಯ್ ಮಾಡು' ಅಂತ ನನಗೆ ಹೇಳಿದಳಲ್ಲಾ. ನಾನ್ ನಿಜವಾಗ್ಲೂ ಎಂಜಾಯ್ ಮಾಡ್ತಾ ಇದೀನಾ? ನಾನು ಇಲ್ಲಿಗೆ ಬರುವಾಗ ಎಷ್ಟು ಸಂಭ್ರಮದಿಂದ ಬಂದಿದ್ದೆ... ಇಲ್ಲಿ ಬಂದು ನೋಡಿದರೆ ನನ್ನ ಕಲ್ಪನೆಯಲ್ಲಿದ್ದದ್ದೆಲ್ಲಾ ಬಹಳ ಬದಲಾಗಿದೆ. ಮದುವೆ ಮನೆಯ ಸಂಭ್ರಮವಿಲ್ಲ. ಮೊದಲೆಲ್ಲ ಮನೆಯಲ್ಲೇ ಹಪ್ಪಳ, ಸಂಡಿಗೆ, ಸಂಬಂಧಿಕರೆಲ್ಲಾ ಒಂದೊಂದು ಕೆಲಸ. ಎಲ್ಲರೂ ಒಂದು ತಿಂಗಳಿನಿಂದ ಒಟ್ಟಿಗೆ ಕೂಡಿಕೊಂಡು ತಮಾಷೆ ಮಾಡಿಕೊಂಡು ಕೆಲಸ ಮಾಡುತ್ತಿದ್ದೆವು... ಈಗ ಎಲ್ಲ ಕೇಟರಿಂಗ್ ಅಂತೆ. ಅಣ್ಣ, ಅತ್ತಿಗೆ, ಶರ್ಮಿಳಾ ಮೂವರೇ ಎಲ್ಲವನ್ನು ನಿರ್ಧಾರ ಮಾಡಿ ಪ್ಲಾನ್ ಮಾಡಿಯಾಗಿದೆ. ಲಗ್ನ ಪತ್ರಿಕೆಗೆ ಅರಿಸಿನ ಹಚ್ಚೋಣವೇ ಎಂದು ಅತ್ತಿಗೆಯನ್ನು ಕೇಳಿದ್ರೆ, 'ಇಲ್ಲಾ, ಎಲ್ಲಾ ಆನ್‌ಲೈನ್‌ನಲ್ಲಿ ಕಳುಹಿಸಿಯಾಯಿತು' ಎಂದರು. ಛೇ ಮೊದಲಿನ ಸಂಭ್ರಮವೇ ಇಲ್ಲ... 'ಅತ್ತಿಗೆ, ಮನೆಗೆ ಯಾರೂ ಬರೋಲ್ವ, ಮದುವೆ ಅಲ್ವಾ' ಎಂದು ಕೇಳಿದ್ದಕ್ಕೆ, 'ಈಗ ಯಾರೂ ಯಾರ ಮನೆಗೂ ಹೋಗಲ್ಲ. ಎಲ್ಲರೂ ಅವರ ಕೆಲಸದಲ್ಲಿ ಬ್ಯುಸಿ. ಮತ್ತೆ ಏನೂ ಕೆಲ್ಸಾನೂ ಇರಲ್ವಲ್ಲಾ... ಎಲ್ಲಾ ಇವೆಂಟ್ ಮ್ಯಾನೇಜ್‌ಮೆಂಟ್ ಅವರೇ ನೋಡ್ಕೋತಾರೆ... ಮದುವೆ ಮನೇಲೇ ಎಲ್ಲರನ್ನು ಭೇಟಿ ಮಾಡೋದು.'

ನನಗೇಕೋ ಮನಸ್ಸು ಪಿಚ್ಚೆನಿಸಿತ್ತು. ಎಲ್ಲಾ ಮೊದಲಿದ್ದ ಹಾಗಿಲ್ಲ ಎನ್ನಿಸಿತ್ತು. ಆ ಶರ್ಮಿಳಾ ಬೇರೆ ತಾನೇ ಹುಡುಕಿಕೊಂಡಿರುವ ಹುಡುಗ... ಪಂಜಾಬಿ ಅಂತೆ. ಅದು ಹೇಗಾದರೂ ಇವರೆಲ್ಲ ಒಪ್ಪಿದರೋ... ಭಾರತ ಎಷ್ಟು ಬದಲಾಗಿ ಬಿಟ್ಟಿದೆ. ನಾನಲ್ಲಿ ದಿನವೂ ಭಾರತವನ್ನು ನೆನೆಯುತ್ತ ನನ್ನ ದೇಶ ಹಾಗೆ ಹೀಗೆ ಅಂತೆಲ್ಲ ಕನಸು ಕಾಣುತ್ತಾ ಹಳೆಯ ಹಿಂದಿ ಹಾಡುಗಳು... ಕನ್ನಡ ಸೀರಿಯಲ್‌ಗಳಲ್ಲಿ ಜೀವಿಸುತ್ತಿದ್ದೆ. ಇಲ್ಲಿ ಬಂದ್ರೆ ಶರ್ಮಿಳಾ ಸಂಯುಕ್ತಾಳನ್ನು ಪಬ್‌ಗೆ